ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
<u>ಸಿ.ಸಿ. ನಂ ಃ**33/2025**</u>

ಸಾಕ್ಷಿದಾರರ ಹೆಸರು ಃ ಬಿಬಿ ಖತೇಜಾ ಸಿ.ಡಬ್ಲ್ಯೂ - 13
ಗಂಡನ ಹೆಸರು ಃ ಅನ್ಸರ್ ಖಾನ್ ಪಿ.ಡಬ್ಲ್ಯೂ - 07
ವಯಸ್ಸು ಃ 54 ವರ್ಷ
ಉದ್ಯೋಗ ಃ ಗೃಹಿಣಿ
ವಾಸಸ್ಥಳ ಃ ಟಿಪ್ಪು ನಗರ, ಶಿವಮೊಗ್ಗ

ದಿನಾಂಕಃ **16/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ</u>

ನಾನು ನನ್ನ ಇಬ್ಬರ ಮಕ್ಕಳೊಂದಿಗೆ ಶಿವಮೊಗ್ಗದಲ್ಲಿ ವಾಸವಿದ್ದು, ನನ್ನ ಮಗನಾದ ಆಯೂಬ್ ಖಾನ್ ಈತನ ಹೆಸರಿನಲ್ಲಿ 2019 ರಲ್ಲಿ ನನ್ನ ಮಗ ಅಪಾಚಿ ಬೈಕನ್ನು ಕೊಂಡುಕೊಂಡಿದ್ದು, ಸದರಿ ಬೈಕನ್ನು ನನ್ನ ಮಗ ಆಯೂಬ್ ಈತನು ತೆಗೆದುಕೊಂಡು ಹೋಗುವಾಗ ಗಾಜನೂರು ರಸ್ತೆಯಲ್ಲಿ ಒಂದು ಕಾರಿಗೆ ಅಪಘಾತ ಮಾಡಿದ್ದು ಆ ಸಂಬಂದ ತುಂಬಾ ನಗರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದ್ದು, ಆ ಸಮಯದಲ್ಲಿ ನಮ್ಮ ಬೈಕನ್ನು ಶೋ ರೂಮಿಗೆ ಬಿಟ್ಟು ರಿಪೇರಿ ಬಗ್ಗೆ ಇನ್ಸೂರೆನ್ಸ್ ಕ್ಲೇಮು ಮಾಡಿಕೊಂಡು ನಂತರ ಸದರಿ ಬೈಕನ್ನು ಶಿಕಾರಿಪುರ ವಾಸಿ ಗುಡದಯ್ಯ ಎನ್ನುವವರಿಗೆ ಮಾರಾಟ ಮಾಡಿದ್ದು, ಅವರಿಗೆ ದಾಖಲಾತಿಗಳನ್ನು ನೀಡಿ ಅವರ ಹೆಸರಿಗೆ ಅವರು ವರ್ಗಾವಣೆ ಮಾಡಿಸಿಕೊಂಡಿರುವುದಿಲ್ಲ. ನಂತರ ಎನ್ ಆರ್ ಪುರ ಪೊಲೀಸರು ತಮಗೆ ಪೋನ್ ಮಾಡಿ ನಮ್ಮ ಬೈಕ್ ನಿಂದ ಅಪಘಾತ ಆಗಿರುತ್ತದೆ ಎಂದು ಹೇಳಿದ್ದು, ಆ ಬಗ್ಗೆ ನಮಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಎಂದು ತನಿಖೆ ಮಾಡುವಂತೆ ಹೇಳಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ</u>

ನನ್ನ ಮಗ ಅಯೂಬ್ ಖಾನ್ ಖರೀದಿಸಿ ಬೈಕ್ ನಂಃ ಕೆಎ 14 ಇಎನ್ 1422 ಬೈಕಾಗಿದ್ದು, ಸದರಿ ಬೈಕನ್ನು ನಾವು ಬ್ರೋಕ್ ಮೂಲಕ ಶಿಕಾರಿಪುರ ವಾಸಿ ಗುಡದಯ್ಯ ಎನ್ನುವವರಿಗೆ ಮಾರಾಟ ಮಾಡಿದ್ದೆವು ಎಂದರೆ ಸರಿ. ಸದರಿ ಬೈಕಿನ ದಾಖಲಾತಿಗಳು ನನ್ನ ಹೆಸರಿನಲ್ಲಿದ್ದವು ಎಂದರೆ ಸರಿ. ದಿಃ 24/06/2022 ರಂದು ಬೆಳಿಗ್ಗೆ 8.45 ರ ಸುಮಾರಿಗೆ ಎನ್ ಆರ್ ಪುರ ವಾಸಿ ಅಬ್ದುಲ್ ನಾಸೀರ್

ಈತನು ದುಡುಕು ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಹೋಗಿ ಉಮೇಶ ರವರಿಗೆ ಡಿಕ್ಕಿ ಪಡಿಸಿ ಅವರು ಮೃತಪಟ್ಟಿರುತ್ತಾರೆ ಎಂಬ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿ. ನಂತರ ನಾವು ಬೈಕು ಮಾರಾಟ ಮಾಡಿರುವ ಗುಡದಯ್ಯ ಇವರನ್ನು ವಿಚಾರ ಮಾಡಲಾಗಿ ಘಟನೆ ನಡೆದ ದಿನ ಬೈಕು ತನ್ನ ಬಳಿಯೇ ಇರುವುದಾಗಿ, ಬೈಕನ್ನು ತಾನು ಯಾರಿಗೂ ಕೊಟ್ಟಿಲ್ಲ ಎಂದು ತಿಳಿಸಿದ್ದು ಆ ಸಂಬಂದ ತನಿಖೆ ಆಗುವಂತೆ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ಡಿ ವಕೀಲರಿಂದಃ</u>

ತುಂಗಾ ನಗರ ಪೊಲೀಸ್ ಠಾಣೆಯಲ್ಲಿ ಅಪಘಾತ ಸಂಬಂದ ಪ್ರಕರಣ ದಾಖಲಾಗಿದ್ದ ಬಗ್ಗೆ ನಾನು ದಾಖಲಾತಿಯನ್ನು ತನಿಖಾಧಿಕಾರಿ ಮುಂದೆ ಕೊಟ್ಟಿಲ್ಲ ಎಂದರೆ ಸರಿ. ನಾವು ಗುಡದಯ್ಯ ರವರಿಗೆ ಬೈಕನ್ನು ಮಾರಾಟ ಮಾಡಿದ್ದ ಬಗ್ಗೆ ನಮೂನೆ-29,30 ಹಾಗೂ ಡೆಲಿವರಿ ನೋಟನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ಬೈಕನ್ನು ಗುಡದಯ್ಯ ರವರಿಗೆ ಮಾರಾಟ ಮಾಡಿರುವುದಿಲ್ಲ ಆದರೆ ವಿಮಾ ಕಂಪನಿಯವರು ಮಾರಾಟ ಮಾಡಿರುತ್ತಾರೆ. ವಿಮಾ ಕಂಪನಿಯವರು ಬೈಕನ್ನು ಮಾರಾಟ ಮಾಡಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

2. ನನಗೆ ಈ ಪ್ರಕರಣದ ಸಂಬಂದ ಪೊಲೀಸರು ಯಾವುದೇ ನೋಟೀಸನ್ನು ನೀಡಿಲ್ಲ ಎಂದರೆ ಸರಿ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ **ನ.ರಾ.ಪುರ.**

ಸಾಕ್ಷಿದಾರರ ಸಹಿಃ